**All India Radio: Bangalore**
**National Bulletins In Kannada**
**13.07.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.07.2025 / 7.35 am**

**<><*<><>*><>**

<u>ಮುಖ್ಯಾಂಶಗಳು</u>

**೧. ಹದಿನಾರನೇ ರೋಜ್‌ಗಾರ್ ಮೇಳದಲ್ಲಿ ೫೧ ಸಾವಿರಕ್ಕೂ ಅಧಿಕ ಉದ್ಯೋಗ ನೇಮಕಾತಿ ಪತ್ರ ವಿತರಿಸಿದ ಪ್ರಧಾನಿ ನರೇಂದ್ರ ಮೋದಿ**

**೨. ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಜೈಶಂಕರ್ ಇಂದಿನಿಂದ ಇದೇ ೧೫ರವರೆಗೆ ಸಿಂಗಾಪು ಮತ್ತು ಚೀನಾಗೆ ಭೇಟಿ**

**೩. ಶುಭ ಸುಶ್ರುತ ಜಯಂತಿ ಅಂಗವಾಗಿ ದೆಹಲಿಯಲ್ಲಿ ಇಂದಿನಿಂದ ಮೂರು ದಿನ ರಾಷ್ಟ್ರೀಯ ವಿಚಾರಣ ಸಂಕಿರಣ ಆಯೋಜನೆ**

**೪. ವಿಂಬಲ್ಡನ್ ಟೆನಿಸ್ : ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಇಗಾ ಸ್ವಿಯಾಟೆಕ್ ನೂತನ ಚಾಂಪಿಯನ್**

**<><*<><>*><>**

ದೇಶದಾದ್ಯಂತ ೪೭ ಸ್ಥಳಗಳಲ್ಲಿ ನಿನ್ನೆ ನಡೆದ ೧೬ನೇ ಉದ್ಯೋಗ ಮೇಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವ ಉದ್ಯೋಗಿಗಳಿಗೆ ವರ್ಚುವಲ್ ಮೂಲಕ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಿದರು. ನಂತರ ಮಾತನಾಡಿದ ಪ್ರಧಾನಿ, ಜನಸಂಖ್ಯೆ ಮತ್ತು ಪ್ರಜಾಪ್ರಭುತ್ವವು ಭಾರತದ ಎರಡು ಅಪರಿಮಿತ ಶಕ್ತಿಗಳಾಗಿವೆ. ಇದನ್ನು ಜಗತ್ತು ಕೂಡ ಒಪ್ಪಿಕೊಂಡಿದೆ. ಉದ್ಯೋಗ ಮೇಳದಿಂದ ಈಗಾಗಲೇ ಲಕ್ಷಾಂತರ ಯುವಕರು ಕೇಂದ್ರ ಸರ್ಕಾರದಲ್ಲಿ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ಈ ಯುವಕರು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದರು. ದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ನವೋದ್ಯಮಗಳು, ನಾವೀನ್ಯತೆ ಮತ್ತು ಸಂಶೋಧನೆಯ ಪರಿಸರ ವ್ಯವಸ್ಥೆಯು ದೇಶದ ಯುವಕರ ಸಾಮರ್ಥ್ಯವನ್ನು ಹೆಚ್ಚಿಸಿವೆ ಎಂದು ಪ್ರಧಾನಿ ಹೇಳಿದರು. ದೇಶಾದ್ಯಂತ ಆಯ್ಕೆಯಾದ ಅಭ್ಯರ್ಥಿಗಳು ರೈಲ್ವೆ, ಗೃಹ ವ್ಯವಹಾರಗಳು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಮಿಕ ಮತ್ತು ಉದ್ಯೋಗ ಹಾಗೂ ಅಂಚೆ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉದ್ಯೋಗ ಮೇಳಗಳ ಮೂಲಕ ಇಲ್ಲಿಯವರೆಗೆ ಹತ್ತು ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ನೀಡಲಾಗಿದೆ.  ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನೈಋುತ್ಯ ರೈಲ್ವೆ ಸಹಯೋಗದಲ್ಲಿ ಆಯೋಜಿಸಿದ್ದ ರೋಜ್‌ಗಾರ್ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಶೋಭಾ ಕರಂದ್ಲಾಜೆ ಭಾರತ ದೇಶ ಯುವ ರಾಷ್ಟ್ರವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, ೨೦೪೭ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸಲು ಯುವಪೀಳಿಗೆಯ ಕೊಡುಗೆ ಅತಿ ಮುಖ್ಯ ಎಂದು ಹೇಳಿದ್ದಾರೆ.  ಕರ್ನಾಟಕದ ಹುಬ್ಬಳ್ಳಿಯ ಕೇಶ್ವಾಪುರದ ಆಫೀಸರ್ಸ್ ಕ್ಲಬ್ ನಲ್ಲಿ ನೈರುತ್ಯ ರೈಲ್ವೆ ಸಹಯೋಗದಲ್ಲಿ ಆಯೋಜಿಸಿದ್ದ ವರ್ಚುವಲ್ ಮೂಲಕ ನಡೆದ ರೋಜಗಾರ್ ಮೇಳಕ್ಕೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ರೋಜ್‌ಗಾರ್ ಮೇಳದ ಮೂಲಕ ೧೦ ವರ್ಷದಲ್ಲಿ ೧೦ ಲಕ್ಷ ಉದ್ಯೋಗ ನೀಡುವ ಗುರಿಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೊಂದಿದ್ದು, ಅದರಂತೆ ರೋಜಗಾರ ಮೇಳದಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರವನ್ನು ವಿತರಣೆ ಮಾಡಲಾಗುತ್ತಿದೆ ಎಂದರು.

<><*<><>*><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರು ಇಂದಿನಿಂದ ಜುಲೈ ೧೫ ರವರೆಗೆ ಸಿಂಗಾಪುರ ಮತ್ತು ಚೀನಾಕ್ಕೆ ಭೇಟಿ ನೀಡಲಿದ್ದಾರೆ. ಸಿಂಗಾಪುರದಲ್ಲಿ, ಡಾ.ಜೈಶಂಕರ್ ಅವರು ತಮ್ಮ ಸಹವರ್ತಿ ಮತ್ತು ಸಿಂಗಾಪುರದ ನಾಯಕರೊಂದಿಗೆ ಉಭಯ ದೇಶಗಳ ನಡುವಿನ ನಿಯಮಿತ ವಿನಿಮಯದ ಭಾಗವಾಗಿ ಭೇಟಿ ಮಾಡಲಿದ್ದಾರೆ. ತಮ್ಮ ಎರಡು ರಾಷ್ಟ್ರಗಳ ಪ್ರವಾಸದ ಎರಡನೇ ಹಂತದಲ್ಲಿ, ವಿದೇಶಾಂಗ ಸಚಿವರು ಟಿಯಾಂಜಿನ್ ನಲ್ಲಿ ನಡೆಯುತ್ತಿರುವ ಎಸ್ ಸಿಒ ವಿದೇಶಾಂಗ ಸಚಿವರ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಚೀನಾಕ್ಕೆ ಭೇಟಿ ನೀಡಲಿದ್ದಾರೆ. ಸಭೆಯ ಹೊರತಾಗಿ ಅವರು ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ.

<><*<><>*><>

ದೆಹಲಿಯ ಅಖಿಲ ಭಾರತ ಆಯುರ್ವೇದ ಸಂಸ್ಥೆ  ಶುಭ ಸುಶ್ರುತ ಜಯಂತಿಯ ಆಚರಣೆಯಲ್ಲಿ ಇಂದಿನಿಂದ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವಾದ ಶಲ್ಯಕಾನ್ ೨೦೨೫ ಅನ್ನು ಆಯೋಜಿಸುತ್ತಿದೆ. ಶಸ್ತ್ರಚಿಕಿತ್ಸೆಯ ಪಿತಾಮಹ ಎಂದು ಪೂಜಿಸಲ್ಪಡುವ ಪ್ರಸಿದ್ಧ ಆಚಾರ್ಯ ಸುಶ್ರುತನ ನೆನಪಿಗಾಗಿ ಪ್ರತಿವರ್ಷ ಜುಲೈ ೧೫ರಂದು ಸುಶ್ರುತ ಜಯಂತಿಯನ್ನು ಆಚರಿಸಲಾಗುತ್ತದೆ. ಸೆಮಿನಾರ್ ಸಾಮಾನ್ಯ ಶಸ್ತ್ರಚಿಕಿತ್ಸೆಗಳು, ಅನೋರೆಕ್ಟಲ್ ಶಸ್ತ್ರಚಿಕಿತ್ಸೆಗಳು

ಮತ್ತು ಯುರೋಸರ್ಜಿಕಲ್ ಪ್ರಕರಣಗಳು ಸೇರಿದಂತೆ ನೇರ ಶಸ್ತ್ರಚಿಕಿತ್ಸೆಯ ಪ್ರದರ್ಶನಗಳನ್ನು ಒಳಗೊಂಡಿರುತ್ತದೆ.

<><*<><>*><>

ಅರ್ಹತಾ ಪರೀಕ್ಷಾ ಕಾರ್ಯಕ್ರಮವನ್ನು ಪೂರ್ಣಗೊಳಿಸುವುದರೊಂದಿಗೆ ಗಗನಯಾನ ಮಿಷನ್ ಗಾಗಿ ಸರ್ವಿಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್ ಅಭಿವೃದ್ಧಿಯನ್ನು ಭಾರತೀಯ ಬಾಹ್ಯಾಕಾಶ ಸಂಸ್ಥೆ - ಇಸ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಜುಲೈ ೧೧ರಂದು ಎಸ್‌ಎಂ ಆಧಾರಿತ ಮಿಷನ್ ಅಬಾರ್ಟ್ ನ ಫ್ಲೈಟ್ ಆಫ್-ನಾಮಮಾತ್ರ ಮಿಷನ್ ಪ್ರೊಫೈಲ್ ಗಾಗಿ ಎಸ್‌ಎಂಪಿಎಸ್ ನ ಸಮಗ್ರ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸಲು ೩೫೦ ರ ಎಸ್‌ಎಂಪಿಎಸ್ ನ ಪೂರ್ಣ ಅವಧಿಯ ಉಷ್ಣಾಂಶ ಪರೀಕ್ಷೆಯನ್ನು ನಡೆಸಲಾಯಿತು. ಪರೀಕ್ಷಾ ಪೂರ್ವ ಮುನ್ಸೂಚನೆಗಳ ಪ್ರಕಾರ, ಉಷ್ಣಾಂಶ ಪರೀಕ್ಷೆಯ ಸಮಯದಲ್ಲಿ ಪ್ರೊಪಲ್ಷನ್ ವ್ಯವಸ್ಥೆಯ ಒಟ್ಟಾರೆ ಕಾರ್ಯಕ್ಷಮತೆ ಸಾಮಾನ್ಯವಾಗಿದೆ.

<><*<><>*><>

ರಿಯಲ್ ಎಸ್ಟೇಟ್ ಸಂಸ್ಥೆ ಪರ್ಲ್ಸ್ ಆಗ್ರೋಟೆಕ್ ಕಾರ್ಪೊರೇಷನ್ ಲಿಮಿಟೆಡ್ -ಪಿಎಸಿಎಲ್ ಮತ್ತು ಅದರ ನಿರ್ದೇಶಕರು ಮತ್ತು ಪ್ರವರ್ತಕರ ವಿರುದ್ಧ ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ -ಇಡಿ , ೭೬೨ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. ಈ ಆಸ್ತಿಗಳು ಪಂಜಾಬ್, ಹರಿಯಾಣ, ದೆಹಲಿ, ಮಹಾರಾಷ್ಟ್ರ ಮತ್ತು ಆಸ್ಟ್ರೇಲಿಯಾದಲ್ಲಿವೆ. ಜಾರಿ ನಿರ್ದೇಶನಾಲಯದ ಪ್ರಕಾರ, ಪಿಎಸಿಎಲ್ ಮತ್ತು ಅದರ ನಿರ್ದೇಶಕರು ದೊಡ್ಡ ಪ್ರಮಾಣದ ವಂಚನೆಯ ಸಾಮೂಹಿಕ ಹೂಡಿಕೆ ಯೋಜನೆಗಳನ್ನು ನಡೆಸುತ್ತಿದ್ದರು. ಈ ಮೂಲಕ ಅವರು ಅನುಮಾನಾಸ್ಪದ ಹೂಡಿಕೆದಾರರಿಂದ ಸುಮಾರು ೪೮ ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

<><*<><>*><>

ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ಪ್ರತಿಷ್ಠಿತ ತೇನ್ ಜಿಂಗ್ ನಾರ್ಗೆ ರಾಷ್ಟ್ರೀಯ ಸಾಹಸ ಪ್ರಶಸ್ತಿ ೨೦೨೪ ಕ್ಕೆ ನಾಮನಿರ್ದೇಶನಗಳನ್ನು ತೆರೆಯುವುದಾಗಿ ಘೋಷಿಸಿದೆ. ಈ ಪ್ರಶಸ್ತಿಯು ಸಾಹಸದಲ್ಲಿ ಅತ್ಯುತ್ತಮ ಸಾಧನೆಗಳನ್ನು ಗುರುತಿಸುತ್ತದೆ. ಸಹಿಷ್ಣುತೆ, ಅಪಾಯವನ್ನು ತೆಗೆದುಕೊಳ್ಳುವ ಸಾಮರ್ಥ್ಯ, ಸಹಕಾರಿ ತಂಡದ ಕೆಲಸ ಮತ್ತು ಸವಾಲಿನ ಸಂದರ್ಭಗಳಲ್ಲಿ ಯುವಕರಲ್ಲಿ ತ್ವರಿತ ಪ್ರತಿಫಲನಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಅರ್ಜುನ ಪ್ರಶಸ್ತಿಗಳ ಜತೆಗೆ ವಾರ್ಷಿಕವಾಗಿ ನೀಡಲಾಗುವ ತೇನ್ ಜಿಂಗ್ ನಾರ್ಗೆ ರಾಷ್ಟ್ರೀಯ

ಸಾಹಸ ಪ್ರಶಸ್ತಿಯು ನಾಲ್ಕು ವಿಭಾಗಗಳಲ್ಲಿ ಶ್ರೇಷ್ಠತೆಯನ್ನು ಗೌರವಿಸುತ್ತದೆ: ಭೂ ಸಾಹಸ, ಜಲ ಸಾಹಸ, ವಾಯು ಸಾಹಸ ಮತ್ತು ಈ ಕ್ಷೇತ್ರಗಳಲ್ಲಿ ಸಾಹಸ ಚಟುವಟಿಕೆಗಳಿಗಾಗಿ ಜೀವಮಾನ ಸಾಧನೆ. ಜೂನ್ ೧ ರಿಂದ ಜುಲೈ ೧೫ ರವರೆಗೆ ಪೋರ್ಟಲ್ https://awards.gov.in ಮೂಲಕ ೨೦೨೪ ರ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳನ್ನು ಆನ್ ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದೆ.

**<><*<><>*><>**

ಶ್ರೀಲಂಕಾ ಪ್ರಧಾನಿ ಡಾ.ಹರಿಣಿ ಅಮರಸೂರ್ಯ ಮತ್ತು ಭಾರತೀಯ ಹೈಕಮಿಷನರ್ ಸಂತೋಷ್ ಝಾ ಜಂಟಿಯಾಗಿ ಅನುರಾಧಪುರದ ಎಲಪತ್ ಗಾಮಾ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾದ ೬೦ ಮನೆಗಳನ್ನು ಉದ್ಘಾಟಿಸಿದರು. ಭಾರತ ನೆರವಿನ ಶ್ರೀ ಶೋಭಿತಾ ನಹೀಮಿಗಮ ಯೋಜನೆಯಡಿ ಈ ಮನೆಗಳನ್ನು ನಿರ್ಮಿಸಲಾಗಿದೆ. ಈ ಸಂದರ್ಭದಲ್ಲಿ, ಭಾರತೀಯ ಹೈಕಮಿಷನರ್ ಸಮಗ್ರ ಅಭಿವೃದ್ಧಿಗಾಗಿ ಭಾರತ ಮತ್ತು ಶ್ರೀಲಂಕಾದ ಹಂಚಿಕೆಯ ದೃಷ್ಟಿಕೋನದ ಬಗ್ಗೆಉಲ್ಲೇಖಿಸಿದರು. ರೈಲ್ವೆ ನವೀಕರಣಗಳು ಮತ್ತು ಸೇಕ್ರೆಡ್ ಸಿಟಿ ಕಾಂಪ್ಲೆಕ್ಸ್ ನಂತಹ ಈ ಪ್ರದೇಶದ ಇತರ ಭಾರತೀಯ ಬೆಂಬಲಿತ ಯೋಜನೆಗಳನ್ನು ಅವರು ಉಲ್ಲೇಖಿಸಿದರು. ಪ್ರಧಾನಮಂತ್ರಿ ಅಮರಸೂರ್ಯ ಅವರು, ಪೂಜ್ಯ ಮಧುಲುವಾವೆ ಶೋಭಿತಾ ಥೆರೋ ಅವರ ಪರಂಪರೆಗೆ ಗೌರವ ನಮನ ಸಲ್ಲಿಸಿದರು. ಹಿಂದುಳಿದ ಸಮುದಾಯಗಳನ್ನು ಮೇಲೆತ್ತಲು ಭಾರತದ ಬೆಂಬಲಕ್ಕಾಗಿ ಅವರು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಯೋಜನೆಯು ಉಭಯ ದೇಶಗಳ ನಡುವಿನ ಅಭಿವೃದ್ಧಿ ಸಹಕಾರವನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿದೆ.

**<><*<><>*><>**

ಆಲ್ ಇಂಗ್ಲೆಂಡ್ ಕ್ಲಬ್ ನಲ್ಲಿ ಕಳೆದ ರಾತ್ರಿ ನಡೆದ ಏಕಪಕ್ಷೀಯ ಫೈನಲ್ ನಲ್ಲಿ ಅಮಂಡಾ ಅನಿಸಿಮೊವಾ ಅವರನ್ನು ಸೋಲಿಸುವ ಮೂಲಕ ವಿಂಬಲ್ಡನ್ ಟೆನಿಸ್ ನ ಲ್ಲಿ, ಇಗಾ ಸ್ವಿಯಾಟೆಕ್ ತನ್ನ ಮೊದಲ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಜಯಿಸಿದ್ದಾರೆ. ಪೋಲೆಂಡ್ ನ ಸ್ವಿಯಾಟೆಕ್, ಅಮೆರಿಕದ ಅಮಂಡಾ ಅನಿಸಿಮೊವಾ ಅವರನ್ನು ಕೇವಲ ೫೭ ನಿಮಿಷಗಳಲ್ಲಿ ೬-೦, ೬-೦ ಸೆಟ್ ಗಳಿಂದ ಸೋಲಿಸಿ ಆರನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯನ್ನು ಗೆದ್ದರು. ಜತೆಗೆ ವಿಂಬಲ್ಡನ್ ನಲ್ಲಿ ಮೊದಲ ಬಾರಿಗೆ ಚಾಂಪಿಯನ್ ಆಗಿದ್ದಾರೆ. ಈ ಗೆಲುವಿನೊಂದಿಗೆ ಪ್ರಶಸ್ತಿ ಗೆದ್ದ ಮೊದಲ ಪೋಲೆಂಡ್ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಏತನ್ಮಧ್ಯೆ, ಜೂಲಿಯನ್ ಕ್ಯಾಶ್ ಮತ್ತು ಲಾಯ್ಡ್ ಗ್ಲಾಸ್ಪೂಲ್ ವಿಂಬಲ್ಡನ್ ೨೦೨೫ ರಲ್ಲಿ ಇತಿಹಾಸ ನಿರ್ಮಿಸಿದ್ದಾರೆ. ೧೯೩೬ ರ ನಂತರ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದ ಮೊದಲ ಬ್ರಿಟಿಷ್ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಜೋಡಿ ಆಸ್ಟ್ರೇಲಿಯಾದ ರಿಂಕಿ ಹಿಜಿಕಟಾ ಮತ್ತು ನೆದರ್ಲೆಂಡ್ ನ ಡೇವಿಡ್ ಪೆಲ್ ಅವರನ್ನು ಸೋಲಿಸಿತು.

ಪ್ಯಾಟ್ ಹ್ಯೂಸ್ ಮತ್ತು ರೇಮಂಡ್ ಟಕಿ ೮೯ ವರ್ಷಗಳ ಹಿಂದೆ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದ ಕೊನೆಯ ಬ್ರಿಟಿಷ್ ಜೋಡಿಯಾಗಿದ್ದರು. ಈ ಮಧ್ಯೆ, ವಿಶ್ವದ ನಂ.೧ ಆಟಗಾರ ಇಟಲಿಯ ಜನಿಕ್ ಸಿನ್ನರ್ ಎರಡನೇ ಶ್ರೇಯಾಂಕಿತ ಹಾಗೂ ಎರಡು ಬಾರಿಯ ಹಾಲಿ ಚಾಂಪಿಯನ್ ಸ್ಪೇನ್ ನ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಸೆಣಸಲಿದ್ದಾರೆ. ಭಾರತೀಯ ಕಾಲಮಾನ ರಾತ್ರಿ ೮.೩೦ಕ್ಕೆ ಪಂದ್ಯ ಆರಂಭವಾಗಲಿದೆ.

**<><*<><>*><>**

ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ಮೂರನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಇಂದು ಆತಿಥೇಯ ಇಂಗ್ಲೆಂಡ್ ಭಾರತ ವಿರುದ್ಧ ಎರಡನೇ ಇನಿಂಗ್ಸ್ ಪಂದ್ಯವನ್ನು ಪುನರಾರಂಭಿಸಲಿದೆ. ಭಾರತೀಯ ಕಾಲಮಾನ ಮಧ್ಯಾಹ್ನ ೩.೩೦ಕ್ಕೆ ಪಂದ್ಯ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**